# ಹೊಸತು



## ಕರಾಟ್‌ಲೇನ್ ಒಡವೆ

ಒಡವೆಗಳ ಮಾರಾಟಕ್ಕೆ ಹೆಸರಾದ ಕಂಪೆನಿ ಕರಾಟ್ ಲೇನ್ ರೆಟ್ರೊ ಶೈಲಿಯ ಒಡವೆಗಳ ಸಂಗ್ರಹವನ್ನು ಬಿಡುಗಡೆ ಮಾಡಿದೆ. ಈ ಸಂಗ್ರಹದಲ್ಲಿರುವ ಪೆಂಡೆಂಟ್, ಕಿವಿಯೋಲೆಗಳು ವಿಶಿಷ್ಟ ವಿನ್ಯಾಸದಿಂದ ಕೂಡಿದ್ದು, ಮದುವೆ ಇನ್ನಿತರ ಸಮಾರಂಭಗಳಿಗೆಂದೇ ವಿನ್ಯಾಸಗೊಳಿಸಲಾಗಿದೆ ಎಂದು ಕಂಪೆನಿ ವಿವರಿಸಿದೆ. ಬೆಲೆ 26,469 ರೂಪಾಯಿ.
**www.caratlane.com**

## ಬಿಂಗೊ ಮಸಾಲಾ ಚೀಸ್

ಸ್ನ್ಯಾಕ್ಸ್‌ಗಳ ತಯಾರಿಕೆಗೆ ಹೆಸರಾದ ಕಂಪೆನಿ ಬಿಂಗೊ 'ಮಸಾಲಾ ಚೀಸ್' ಅನ್ನು ಬಿಡುಗಡೆ ಮಾಡಿದೆ. ಈ ಚೀಸ್ ವಿವಿಧ ಸ್ವಾದಗಳಲ್ಲಿ ಲಭ್ಯವಿದ್ದು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ರುಚಿಯ ಮಿಶ್ರಣವಾಗಿದೆ ಎಂಬುದು ಕಂಪೆನಿ ವಿವರಣೆ. ಬೆಲೆ 5 ರೂಪಾಯಿ.




## ರ್‍ಯಾಂಗ್ಲರ್ ಉಡುಪು

ಉಡುಪುಗಳ ಮಾರಾಟಕ್ಕೆ ಹೆಸರಾದ ಕಂಪೆನಿ ರ್‍ಯಾಂಗ್ಲರ್ ಸಿಲ್ವರ್ ಶೀಲ್ಡ್ ಹೆಸರಿನ ಉಡುಪುಗಳ ಸಂಗ್ರಹವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಚಳಿಗಾಲಕ್ಕೆ ಹೊಂದುವ ಪುರುಷ ಮತ್ತು ಮಹಿಳೆಯರ ಉಡುಪುಗಳು ಈ ಸಂಗ್ರಹದಲ್ಲಿ ಇದ್ದು, ಗ್ರಾಹಕರಿಗೆ ಮೆಚ್ಚುಗೆಯಾಗಲಿದೆ ಎಂದು ಕಂಪೆನಿ ವಿಶ್ವಾಸ ವ್ಯಕ್ತಪಡಿಸಿದೆ. ಬೆಲೆ 2,499 ರೂಪಾಯಿಯಿಂದ ಆರಂಭ.
**www.wranglerap.com**







## ಹೊಸ ಶ್ರವಣ ಸಾಧನ

ಎಲೆಕ್ಟ್ರಾನಿಕ್ ಉತ್ಪನ್ನಗಳಿಗೆ ಹೆಸರಾದ ಕೊಚ್‌ಲೀರ್ ಕಂಪೆನಿ ಕಾನ್ಸೋ ಟಿಎಂ ಹೆಸರಿನ ಶ್ರವಣ ಸಾಧನವೊಂದನ್ನು ಪರಿಚಯಿಸಿದೆ. ಇದು ದನಿ ಸ್ಪಷ್ಟವಾಗಿ ಕೇಳಿಸಲು ಸಹಕಾರಿಯಾಗಿದೆ. ಕೇಳುಗರಿಗೆ ಉತ್ತಮ ಅನುಭವ ನೀಡಲಿದೆ ಎಂದು ಕಂಪೆನಿ ಹೇಳಿದೆ. **www.cochlear.com**




## ಜಿಯೋನಿ ರೆಡ್ ಮಿ 3

ಮೊಬೈಲ್ ಇನ್ನಿತರ ಎಲೆಕ್ಟ್ರಾನಿಕ್ ಉತ್ಪನ್ನಗಳಿಗೆ ಹೆಸರಾದ ಜಿಯೋನಿ ಕಂಪೆನಿ 'ಜಿಯೋನಿ ರೆಡ್ ಮಿ 3' ಹೆಸರಿನ ಸ್ಮಾರ್ಟ್‌ಫೋನ್ ಅನ್ನು ಬಿಡುಗಡೆ ಮಾಡಿದೆ. 2ಜಿ ರ್‍ಯಾಮ್ ಹೊಂದಿದ್ದು, 5 ಇಂಚಿನ ಪರದೆ, ಉತ್ತಮ ಸ್ಟೋರೇಜ್ ಸಾಮರ್ಥ್ಯ ಇದ್ದು, 4ಜಿ ಸೌಲಭ್ಯ ಸಹ ಇದೆ. 4100 ಮೆಗಾ ಹರ್ಟ್ಸ್ ಸಾಮರ್ಥ್ಯದ ಬ್ಯಾಟರಿ ಇದೆ. ಬೆಲೆ 7,999 ರೂಪಾಯಿ. ಎಲ್ಲ ಮೊಬೈಲ್ ಮಾರಾಟ ಮಳಿಗೆ ಮತ್ತು ಅಂತರ್ಜಾಲ ಮಾರುಕಟ್ಟೆಯಲ್ಲಿ ಲಭ್ಯ.



## ಲೈಮ್‌ರೋಡ್ ಬಟ್ಟೆ ಸಂಗ್ರಹ

ಉಡುಪುಗಳ ಮಾರಾಟ ಕಂಪೆನಿ ಲೈಮ್‌ರೋಡ್ ಓಣಂ ಹಬ್ಬವನ್ನು ನೆಪವಾಗಿ ಇಟ್ಟುಕೊಂಡು ಪುರುಷ ಮತ್ತು ಮಹಿಳೆಯರಿಗೆ ಧೋತಿ, ಸೀರೆಗಳ ಸಂಗ್ರಹವನ್ನು ಬಿಡುಗಡೆಗೊಳಿಸಿದೆ. ವಿಶಿಷ್ಟ ವಿನ್ಯಾಸ ಮತ್ತು ಬಣ್ಣಗಳಲ್ಲಿ ಉಡುಪುಗಳು ಲಭ್ಯವಿದೆ ಎಂದು ಕಂಪೆನಿ ಹೇಳಿದೆ.
**www.limeroad.com**